

ಆನ್‌ಲೈನ್ ಪಾವತಿ ಮತ್ತು ಖರೀದಿಯ ಸಂದರ್ಭದಲ್ಲಿ ಗ್ರಾಹಕರ ವೇಲೆ ವಹಿವಾಟು ಶುಲ್ಕ ವಿಧಿಸುವುದನ್ನು ಕೈಬಿಡಬೇಕು. ಪಿಓಎಸ್ ಯಂತ್ರಗಳ ಮೂಲಕ 2000 ರೂಪಾಯಿವರೆಗಿನ ಪಾವತಿಗಳಿಗೆ ತಾತ್ಕಾಲಿಕ ಶುಲ್ಕ ವಿನಾಯ್ತಿಯನ್ನು ಸರ್ಕಾರ ಇತ್ತೀಚೆಗೆ ಪ್ರಕಟಿಸಿದೆ. ಆದರೆ ಇದು 'ಸದ್ಯಕ್ಕೆ ಪ್ರೋತ್ಸಾಹ ನೀಡಲು' ಎಂಬಂತೆ ಆಗಬಾರದು. ಬ್ಯಾಂಕ್ ಕಾರ್ಡ್‌ಗಳ ಶುಲ್ಕ ರದ್ದುಗೊಳಿಸುವುದು, ಆನ್‌ಲೈನ್ ಖರೀದಿಯ ಸಂದರ್ಭದಲ್ಲಿ ಶುಲ್ಕವನ್ನು ಮಾರಾಟಗಾರರಿಂದಲೇ ವಸೂಲಿ ಮಾಡುವುದು– ಮುಂತಾದ ಕ್ರಮಗಳು ಗ್ರಾಹಕಸ್ನೇಹಿ ಆಗಬಲ್ಲವು.

ಆದರೆ ಡಿಜಿಟಲ್ ಆರ್ಥಿಕತೆ ತಂದೊಡ್ಡುವ ಸ್ವಭಾವಜನ್ಯ ಅಪಾಯಗಳನ್ನು ತಳ್ಳಿಹಾಕಲು ಆಗುವುದಿಲ್ಲ. ಸಾಮಾನ್ಯವಾಗಿ ಜನರು ಕೈಯಲ್ಲಿ ನಗದು ಇದ್ದರೆ ಹೆಚ್ಚು ಜಾಗರೂಕತೆಯಿಂದ ಖರ್ಚು ಮಾಡುತ್ತಾರೆ. ಇದು ಮನೋವಿಜ್ಞಾನಿಗಳು ಕಂಡುಕೊಂಡ ಸತ್ಯ. ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಜೇಬಿನಲ್ಲಿ ಇದ್ದಾಗ ಖರ್ಚಿನ ಮೇಲಿನ ಹಿಡಿತಕ್ಕಿಂತ ಗ್ರಾಹಕೀಕರಣದಿಂದ ಉಂಟಾಗಿರುವ ಮನೋವಾಂಛಲ್ಯವೇ ಮೇಲುಗೈ ಸಾಧಿಸುತ್ತದೆ. ವಿವೇಚನಾರಹಿತ ವೆಚ್ಚಗಳು ಹೆಚ್ಚಾಗಿ ಸಾಲದ ಜಾಲದಲ್ಲಿ ಬೀಳುವ ಅಪಾಯ ಹೆಚ್ಚಾಗಿದೆ.

ಡಿಜಿಟಲ್ ಫ್ಲಾಟ್‌ಫಾರಂಗಳ ಮೂಲಕ ವಹಿವಾಟು ಹೆಚ್ಚಾದಷ್ಟೂ 'ಹ್ಯಾಕಿಂಗ್'ನ ಸಾಧ್ಯತೆ ಹೆಚ್ಚಾಗುತ್ತದೆ ಎನ್ನುವುದು ತಜ್ಞರು ನೀಡುವ ಎಚ್ಚರಿಕೆ. ಖಾತೆಗೆ ಕಳವು ಆದರೆ ಈ ನಷ್ಟವನ್ನು ತುಂಬಿಕೊಡುವವರು ಯಾರು? ಬ್ಯಾಂಕ್‌ಗಳು ಇದರ ಹೊಣೆಯನ್ನು ಹೊರುವುದಿಲ್ಲ. ತಂತ್ರಜ್ಞಾನದ ಕುರಿತು ಹೆಚ್ಚು ಮಾಹಿತಿಯಿಲ್ಲದ ಗ್ರಾಹಕರು ಇಂತಹ ಸಂದರ್ಭಗಳಲ್ಲಿ ಎದುರಿಸುವ ಮನೋಕ್ಲೇಶಗಳಿಗೂ ಪರಿಹಾರ ಸಿಗುವುದಿಲ್ಲ.

'ನಿಮ್ಮ ಸ್ಮಾರ್ಟ್‌ಫೋನನ್ನೇ ಪರ್ಸ್ ಎಂದು ಭಾವಿಸಿ' ಎಂದು ಪ್ರಚಾರ ಮಾಡುವುದು ಸುಲಭ. ಎಲ್ಲ ವ್ಯವಹಾರಗಳನ್ನೂ ಫೋನ್ ಮೂಲಕ ನಡೆಸುವ ವ್ಯಕ್ತಿ ಫೋನ್ ಕಳೆದುಕೊಂಡರೆ? ಒಟ್ಟು ವಹಿವಾಟೇ ಕುಸಿದು ಬೀಳುವ ಪರಿಸ್ಥಿತಿಯದು. ಫೋನ್‌ಗಳು ರಿಪೇರಿಗೆ ಬಂದರೆ ಅವುಗಳನ್ನು ಮಳಿಗೆಗಳಲ್ಲಿ ರಿಪೇರಿಗೆ ಕೊಡುವುದು ಕೂಡಾ ಕಷ್ಟದ ಕೆಲಸ. ಎಲ್ಲಿ ನಮ್ಮ ಹಣಕಾಸಿಗೆ ಸಂಬಂಧಿಸಿದ ಮಾಹಿತಿಗಳು ಕಳವಾಗಿ ಬಿಡುತ್ತವೆಯೋ ಎಂಬ ಆತಂಕ ಕಾಡುತ್ತದೆ. ಡಿಜಿಟಲ್ ವಹಿವಾಟನ್ನು ಇಂತಹ ಅಪಾಯಗಳಿಂದ ರಕ್ಷಿಸುವುದು ಸುಲಭವಿಲ್ಲ. ಈ ನಿಟ್ಟಿನಲ್ಲಿ ತಂತ್ರಜ್ಞಾನ ಕ್ಷೇತ್ರವು ಇನ್ನಷ್ಟು ದೊಡ್ಡ ದಾಪುಗಾಲುಗಳನ್ನು ಇಡುವ ಅಗತ್ಯವಿದೆ.

ಒಟ್ಟು ವಹಿವಾಟಿನಲ್ಲಿ ಶೇಕಡಾ 90ರಷ್ಟು ನಗದು ವಹಿವಾಟುಗಳೇ ನಡೆಯುತ್ತಿರುವ ದೇಶದಲ್ಲಿ ಡಿಜಿಟಲ್ ಆರ್ಥಿಕತೆಗೆ ಹೊರಳುವ ಪ್ರಕ್ರಿಯೆ ಅಷ್ಟು ಸರಳವಿಲ್ಲ. ಅದಕ್ಕೆ ಸಾಕಷ್ಟು ಪೂರ್ವಸಿದ್ಧತೆಗಳ ಅಗತ್ಯವಿದೆ. ಅಂತಹ ಪೂರ್ವಸಿದ್ಧತೆಗಳು ಇಲ್ಲದ ಸಂದರ್ಭದಲ್ಲಿ ಈಗ ಎದುರಿಸುವಂತಹ ಎಲ್ಲ ಸಂಕಷ್ಟಗಳಿಗೂ ಜನಸಾಮಾನ್ಯರು ತಲೆ ಒಡ್ಡಬೇಕಾಗುತ್ತದೆ. ■

